ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಸಿ8[7]ಶಾಶಿಅ:ಹೆ.ಶಿ:54:2010-11 ದಿನಾಂಕ:23ನೇ ಜುಲೈ 2011

## : ಜ್ಞಾಪನ :

**ವಿಷಯ**: ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುನ್ನು ಗುರ್ತಿಸುವ ಮತ್ತು ಮರುಹಂಚಿಕೆ ಮಾಡುವ ಬಗ್ಗೆ.

**ಉಲ್ಲೇಖ**: ಈ ಕಛೇರಿ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:05.07.2011.

* * * * *

ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಖಾಲಿ ಹುದ್ದೆಗಳನ್ನು ಗುರ್ತಿಸಿ, ಸ್ಥಳಾಂತರಿಸುವ ಸಂಬಂಧ ವೇಳಾಪಟ್ಟಿ ನಿಗದಿಪಡಿಸಿ, ಅದರಂತೆ ಕ್ರಮ ಕೈಗೊಂಡು ವರದಿ ಸಲ್ಲಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು. ಆದರೆ, ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯನ್ನು ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ನಡೆಸಲು ದಿನಾಂಕ:31.03.2011ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವುದರಿಂದ ಅದರಂತೆ ಮೂರು ಹಂತದಲ್ಲಿ [ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ] ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕೆ ಮಾಡಬೇಕಾಗಿರುತ್ತದೆ.

ಆದುದರಿಂದ ಉಲ್ಲೇಖಿತ ಪತ್ರದಲ್ಲಿ ಸೂಚಿಸಿರುವ ಕಾರ್ಯಸೂಚಿ ವೇಳಾಪಟ್ಟಿಯನ್ನು ಈಕೆಳಕಂಡಂತೆ ಪರಿಷ್ಕರಿಸಿದೆ.

| ಕ್ರಮ ಸಂಖ್ಯೆ | ಹೆಚ್ಚುವರಿ ಶಿಕ್ಷಕರ ಸ್ಥಳಾಂತರಿಸುವ ಚಟುವಟಿಕೆ | ದಿನಾಂಕ |
|---|---|---|
| 01. | ***ಜಿಲ್ಲಾ ಹಂತದಲ್ಲಿ*** ಹೆಚ್ಚುವರಿ ಶಿಕ್ಷಕರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಕೊರತೆಯಿರುವ ಶಾಲೆಗಳನ್ನು ಗುರುತಿಸುವುದು. | 23.07.2011 |
| 02. | ಜಿಲ್ಲೆಯಲ್ಲಿ ಹೆಚ್ಚುವರಿ ಶಿಕ್ಷಕರ ವಿವರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಕೊರತೆಯಿರುವ ಶಾಲೆಗಳ ಪಟ್ಟಿಯನ್ನು ಸಿದ್ದಪಡಿಸುವುದು. | 28.07.2011 |
| 03. | ಜಿಲ್ಲೆಯಲ್ಲಿನ ಹೆಚ್ಚುವರಿ ಶಿಕ್ಷಕರ ವಿವರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಅಗತ್ಯತೆ ಇರುವ ಶಾಲೆಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿ ಶಿಕ್ಷಕರಿಂದ ಆಕ್ಷೇಪಣೆಗಳ ಆಹ್ವಾನಿಸುವ ದಿನಾಂಕ | 05.08.2011 |
| 04. | ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಅಂತಿಮ ಪಟ್ಟಿ ಪ್ರಕಟಿಸುವ ದಿನಾಂಕ | 08.08.2011 |
| 05. | ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆ ಮೂಲಕ ಹೆಚ್ಚುವರಿ ಶಿಕ್ಷಕರನ್ನು / ಜಿಲ್ಲಾ ಮಟ್ಟದ ಕೇಡರ್ ಒಳಗೆ ಸ್ಥಳಾಂತರಿಸುವುದು ಹಾಗೂ ಆದೇಶ ನೀಡುವುದು. | 10.08.2011 |
| 06. | ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಪ್ರಕ್ರಿಯೆ ಪೂರ್ಣಗೊಳಿಸಿ, ಉಳಿದ ಹೆಚುವರಿ ಶಿಕ್ಷಕರ ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಸಂಬಂಧಿಸಿದ ನಿರ್ದೇಶಕರುಗಳಿಗೆ ಸಲ್ಲಿಸುವ ದಿನಾಂಕ | 11.08.2011 |
| 07. | ***ನಿರ್ದೇಶಕರ ಹಂತದಲ್ಲಿ*** ಹೆಚ್ಚುವರಿ ಶಿಕ್ಷಕರ ವಿವರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಕೊರತೆಯಿರುವ ಶಾಲೆಗಳ ತಾತ್ಕಾಲಿಕ ಪಟ್ಟಿಯ ಪ್ರಕಟಣೆ. | 12.08.2011 |
| 08. | ತಾತ್ಕಾಲಿಕ ಪಟ್ಟಿಗೆ ಶಿಕ್ಷಕರು ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 17.08.2011 |
| 09. | ಅಂತಿಮ ಆಧ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಣೆ ದಿನಾಂಕ | 18.08.2011 |

| | | |
|---|---|---|
| 10. | ನಿರ್ದೇಶಕರುಗಳ ಹಂತದಲ್ಲಿ ಕೌನ್ಸಿಲಿಂಗ್. | 20.08.2011 |
| 11. | ನಿರ್ದೇಶಕರುಗಳ ಹಂತದಲ್ಲಿ ಹೆಚ್ಚುವರಿ ಪ್ರಕ್ರಿಯೆ ಪೂರ್ಣಗೊಳಿಸಿ, ಉಳಿದ ಹೆಚುವರಿ ಶಿಕ್ಷಕರ ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರಿಗೆ ಸಲ್ಲಿಸುವ ದಿನಾಂಕ. | 22.08.2011 |
| 12. | ***ರಾಜ್ಯ ಮಟ್ಟದಲ್ಲಿ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರ ಹಂತದಲ್ಲಿ*** ಹೆಚ್ಚುವರಿ ಶಿಕ್ಷಕರ ವಿವರ, ಹೆಚ್ಚುವರಿ ಖಾಲಿ ಹುದ್ದೆಗಳ ವಿವರ ಹಾಗೂ ಶಿಕ್ಷಕರ ಕೊರತೆಯಿರುವ ಶಾಲೆಗಳ ತಾತ್ಕಾಲಿಕ ಪಟ್ಟಿಯ ಪ್ರಕಟಣೆ. | 23.08.2011 |
| 13. | ತಾತ್ಕಾಲಿಕ ಪಟ್ಟಿಗೆ ಶಿಕ್ಷಕರು ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ | 27.08.2011 |
| 14. | ಅಂತಿಮ ಆಧ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ಪಟ್ಟಿ ಪ್ರಕಟಣೆ | 29.08.2011 |
| 15. | ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರ ಹಂತದಲ್ಲಿ ರಾಜ್ಯ ಮಟ್ಟದ ಕೌನ್ಸಿಲಿಂಗ್ | 30.08.2011 |

ದಿ:23.01.2002ರ ಸರ್ಕಾರಿ ಸುತ್ತೋಲೆಯ ನಿಯಮದಡಿ ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸುವುದು ಹಾಗೂ ಅವರನ್ನು ಅವಶ್ಯಕತೆ ಇರುವ ಶಾಲೆಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಜಾರಿಗೊಳಿಸುವ ಕಾರ್ಯವನ್ನು ಮೇಲ್ಕಂಡ ವೇಳಾಪಟ್ಟಿಯಂತೆ ಸಕಾಲದಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದೆ. ಇದೊಂದು ಸಮಯ ಸೀಮಿತ ಕಾರ್ಯಕ್ರಮವೆಂದು ಭಾವಿಸುವುದು.

*ಆಯುಕ್ತರು.*
*ಸಾರ್ವಜನಿಕ ಶಿಕ್ಷಣ ಇಲಾಖೆ.*

***ಇವರಿಗೆ:***

***01.*** ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು [ಆಡಳಿತ] ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.

***02.*** ನಿರ್ದೇಶಕರು, [ಪ್ರೌಢ ಶಿಕ್ಷಣ], ಸಾ.ಶಿ.ಇಲಾಖೆ, ಬೆಂಗಳೂರು. ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.

***03.*** ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.

***04.*** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ ಮಾಹಿತಿಗಾಗಿ

***05.*** ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅನುದಾನಿತ ಶಾಲಾ ಕಾಲೇಜುಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು/ ಉಪನ್ಯಾಸಕರನ್ನು ಗುರುತಿಸುವ ಹಾಗೂ ಮರುಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1] ಸರ್ಕಾರದ ಸುತ್ತೋಲೆ ಸಂಖ್ಯೆ. 112 ಪಿಎಂಸಿ 99, ದಿ:01-06-1999.
2] ಸರ್ಕಾರದ ಸುತ್ತೋಲೆ ಸಂಖ್ಯೆ. 112 ಪಿಎಂಸಿ 99, ದಿ:16-11-1999.
3] ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 52 ವಿವಿಧ 99, ದಿ:02-02-2000.
4] ಸರ್ಕಾರದ ಸುತ್ತೋಲೆ ಸಂಖ್ಯೆ. ಇಡಿ 200 ಪಿಎಂಸಿ 99, ದಿ:03-02-2000.
5] ಸರ್ಕಾರದ ಸುತ್ತೋಲೆ ಸಂಖ್ಯೆ. ಇಡಿ 137 ಎಸ್‌ಇಪಿ 01, ದಿ:23-01-2002.
6] ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 136 ಟಿಪಿಯು 99, ದಿ:09-10-2006.
7] ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 58 ವಿವಿಧ 98, ದಿ:18-10-1998.
8] ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 137 ವಿವಿಧ 98, ದಿ:19-05-1999.
9] ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 52 ವಿವಿಧ 99, ದಿ:02-02-2000.

* * * * *

ಪ್ರಸ್ತಾವನೆ:-

ರಾಜ್ಯದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳ ವತಿಯಿಂದ ನಡೆಯುತ್ತಿರುವ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ, ವಿದ್ಯಾರ್ಥಿಗಳ ಕೊರತೆ ಇದ್ದು, ಇಲ್ಲಿನ ಶಿಕ್ಷಕರು/ಉಪನ್ಯಾಸಕರುಗಳಿಗೆ ನಿಗದಿತ ಕಾರ್ಯಭಾರ ಇಲ್ಲದೇ ಇದ್ದರೂ ಸಹ, ಇವರಿಗೆ ವೇತನವನ್ನು ಬಿಡುಗಡೆ ಮಾಡುತ್ತಿರುವುದು ಕಂಡುಬಂದಿದೆ. ಇದಲ್ಲದೆ ನಿಗದಿತ ವಿದ್ಯಾರ್ಥಿಗಳ ಸಂಖ್ಯೆ ಇಲ್ಲದೇ ಇರುವುದನ್ನು ಗಮನಿಸಿ, ಇವರನ್ನು ಹೆಚ್ಚುವರಿ ಶಿಕ್ಷಕರೆಂದು ಪರಿಗಣಿಸಿ, ಇವರಿಗೆ ಇತರೆ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳಿಗೆ ಮರುಸ್ಥಳಾಂತರ ಮಾಡುವವರೆಗೂ ವೇತನವನ್ನು ತಡೆಹಿಡಿಯಲಾಗುತ್ತಿರುವುದನ್ನೂ ಸಹ ಗಮನಿಸಲಾಗಿದೆ. ಆದುದರಿಂದ ಮೇಲೆ [1] ರಿಂದ [6] ರವರೆಗೆ ಓದಲಾದ ಸರ್ಕಾರದ ಸುತ್ತೋಲೆ ಹಾಗೂ ಅಧಿಸೂಚನೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ವಿದ್ಯಾರ್ಥಿಗಳ ಕೊರತೆಯಿಂದಾಗಿ ಬಳಲುತ್ತಿರುವ ಅನುದಾನಿತ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರು ಹಾಗೂ ಉಪನ್ಯಾಸಕರುಗಳನ್ನು ಹೆಚ್ಚುವರಿಯೆಂದು ಪರಿಗಣಿಸಿ, ಬೇರೆ ಅನುದಾನಿತ ಶಾಲಾ/ಕಾಲೇಜುಗಳಿಗೆ ಮರುಸ್ಥಳಾಂತರ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಅನುಧಾನಿತ ಸಿಬ್ಬಂದಿಯ ಮರುಸ್ಥಳಾಂತರಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾದ [4] & [5] ರಲ್ಲಿ ಓದಲಾದ ಸರ್ಕಾರದ ಸುತ್ತೋಲೆಗಳಲ್ಲಿ ಹಾಗೂ ಅನುದಾನಿತ ಪದವಿ ಪೂರ್ವಕಾಲೇಜುಗಳಿಗೆ ಸಂಬಂಧಿಸಿದಂತೆ, ಮೇಲೆ[6] ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯ ನಿಯಮ 23[2] ರಲ್ಲಿ ವಿವರವಾಗಿ ತಿಳಿಸಲಾಗಿದೆ.

ಆದಾಗ್ಯೂ ಸಹ ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್ 98 & 99ರ ಪ್ರಕಾರ ಅದನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು] ನಿಯಮಗಳು, 1999ರ ನಿಯಮ 10 ಮತ್ತು 11 ರೊಂದಿಗೆ ಓದಿಕೊಂಡಂತೆ, ಇವುಗಳ ಪ್ರಕಾರ ಕ್ರಮ ತೆಗೆದುಕೊಂಡು, ಅನುದಾನಿತ ಖಾಸಗಿ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ರಿಟ್ರೆಂಚ್ ಮಾಡಿ ಅವರ ಅನುದಾನವನ್ನು ನಿಲ್ಲಿಸಿ, ರಾಜ್ಯಮಟ್ಟದ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ವರ್ಗಾವಾರು, ವಿಷಯವಾರು ಪಟ್ಟಿಯನ್ನು ತಯಾರಿಸಿ, ಜೇಷ್ಠತೆಯ ಆಧಾರದ ಮೇಲೆ ಅವರುಗಳನ್ನು ಬೇರೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಮರುಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳುವಂತೆ, ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್ 98, 99 ರಲ್ಲಿನ ಪ್ರಕ್ರಿಯೆಯನ್ನು ನಿರ್ವಹಿಸಲು, ಮೇಲೆ[4] ರಲ್ಲಿ ಓದಲಾದ ಸರ್ಕಾರದ ಸುತ್ತೋಲೆಯಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮೇಲೆ [7] ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ, ಮರುಸ್ಥಳಾಂತರಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಅನುದಾನಿತ ಶಾಲಾ ಕಾಲೇಜುಗಳಲ್ಲಿನ ಮೂಲಭೂತ ಸೌಲಭ್ಯಗಳ ಕೊರತೆ, ಶಿಕ್ಷಕರ ಕೊರತೆಯನ್ನು ಎದುರಿಸುತ್ತಿರುವಂತಹ ಸಂದರ್ಭಗಳಲ್ಲಿ ಈ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಲು ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್ 39 ರಲ್ಲಿರುವ ಅವಕಾಶವನ್ನು ಮೇಲೆ[8] ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಈ ಅನುದಾನಿತ ಶಾಲೆಗಳಿಗೆ ಮಂಜೂರಾಗಿರುವ ಸಹಾಯಾನು

ಸ್ಥಾನವನ್ನು ರದ್ದುಪಡಿಸಲು ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್ 53 ರಡಿಯಲ್ಲಿರುವ ಅವಕಾಶವನ್ನು ಮೇಲೆ [9] ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಆಯಾ ಜಿಲ್ಲಾ ಉಪ ನಿರ್ದೇಶಕರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಮೇಲ್ಕಂಡಂತೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದ್ದರೂ ಸಹ, ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ, ವೃಂದವಾರು, ವಿಷಯವಾರು ಪರಿಗಣಿಸಿ, ರಾಜ್ಯಮಟ್ಟದಲ್ಲಿ ಜೇಷ್ಠತಾ ಪಟ್ಟಿಯನ್ನು ತಯಾರಿಸಿ, ಕೌನ್ಸಿಲಿಂಗ್ ಮೂಲಕ ಇವರನ್ನು ಮರುಸ್ಥಳಾಂತರಗೊಳಿಸುವ ಪ್ರಕ್ರಿಯೆಯನ್ನು ಜಾರಿಗೊಳಿಸುವಲ್ಲಿ ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ, ಬಾಧಿತ ನೌಕರರಿಗೆ ಬೇರೆ ಅನುದಾನಿತ ಹುದ್ದೆಗಳಿಗೆ ಸ್ಥಳಾಂತರ ಮಾಡುವವರೆಗೂ ವೇತನವಿಲ್ಲದೆ ಸಾಕಷ್ಟು ತೊಂದರೆಯನ್ನು ಎದುರಿಸುತ್ತಿರುವುದು ಕಂಡುಬಂದಿದೆ.

ಆದುದರಿಂದ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ನಿಯಮಾನುಸಾರ ಕಾರ್ಯಭಾರವಿಲ್ಲದ ಅನುದಾನಿತ ಸಿಬ್ಬಂದಿಗಳನ್ನು ಹೆಚ್ಚುವರಿಯೆಂದು ಪರಿಗಣಿಸಿ, ಶೀಘ್ರವಾಗಿ ಮರುಸ್ಥಳಾಂತರ ಮಾಡಲು ಅನುಕೂಲವಾಗುವಂತೆ, ಪ್ರಾಥಮಿಕ ಹಂತದಲ್ಲಿಯೇ ಈ ಪ್ರಕ್ರಿಯೆಯನ್ನು ಪ್ರಾರಂಭಿಸುವುದು ಸೂಕ್ತವೆಂದು ಪರಿಗಣಿಸಿ, ಮೇಲೆ [7] ರಿಂದ [8]ರ ಸರ್ಕಾರದ ಅಧಿಸೂಚನೆಗಳಿಗೆ ಸೂಕ್ತ ತಿದ್ದುಪಡಿ ಮಾಡುವ ಷರತ್ತಿಗೊಳಪಟ್ಟು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 69 ಎಸ್‌ಓಹೆಚ್ 2011,**
**ಬೆಂಗಳೂರು, ದಿನಾಂಕ 3ನೇ ಮಾರ್ಚ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ನಿಗದಿತ ಅನುಪಾತವನ್ನು ಹೊಂದದೇ ಇದ್ದಲ್ಲಿ, ಇಂತಹ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆಯಾ ಜಿಲ್ಲಾ ಉಪ ನಿರ್ದೇಶಕರು ಪ್ರತೀ ಶೈಕ್ಷಣಿಕ ವರ್ಷದ ದಾಖಲಾತಿಯ ಅಂತಿಮ ದಿನಾಂಕ ಮುಗಿದ ನಂತರ ಪರಿಶೀಲಿಸಿ, ಮೂಲಭೂತ ಸೌಲಭ್ಯಗಳ, ನಿಗದಿತ ವಿದ್ಯಾರ್ಥಿಗಳ ಕೊರತೆಯಿದ್ದಲ್ಲಿ, ಮೇಲೆ [3] ರಲ್ಲಿ ಓದಲಾದ ನಿಯಮಗಳ ನಿಯಮ 10-11 ರಲ್ಲಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ, [ಜಿಲ್ಲಾವಾರು ಮಾತ್ರ]ಇಲ್ಲಿನ ಅನುದಾನಿತ ಸಿಬ್ಬಂದಿಯನ್ನು ದಾಖಲಾತಿ/ಹಾಜರಾತಿ ಆಧಾರದಲ್ಲಿ ಹೆಚ್ಚುವರಿ ಸಿಬ್ಬಂದಿಯೆಂದು ಪರಿಗಣಿಸಿ, ಜುಲೈ ತಿಂಗಳ ಒಳಗಡೆ ಅದೇ ಜಿಲ್ಲೆಯ ಅನುದಾನಿತ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮರುಸ್ಥಳಾಂತರಗೊಳಿಸತಕ್ಕದ್ದು. ಆ ಜಿಲ್ಲೆಯಲ್ಲಿ ಹುದ್ದೆಗಳು ಖಾಲಿಯಿಲ್ಲದೇ ಇದ್ದಲ್ಲಿ ಪೂರ್ಣ ವಿವರಗಳೊಂದಿಗೆ, ಆಯಾ ಆಯುಕ್ತಾಲಯದ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು ಆಯಾ ಆಯುಕ್ತಾಲಯದ ವ್ಯಾಪ್ತಿಯೊಳಗಿನ ಇತರೆ ಜಿಲ್ಲೆಗಳಲ್ಲಿ
ಖಾಲಿಯಿರುವ ಹುದ್ದೆಗಳ ಮಾಹಿತಿಯನ್ನು ಪಡೆದು, ಕೌನ್ಸಿಲಿಂಗ್ ಮುಖಾಂತರ ಭರ್ತಿ
ಮಾಡತಕ್ಕದ್ದು. ಆಯುಕ್ತಾಲಯದ ವ್ಯಾಪ್ತಿಯಲ್ಲಿಯೂ ಸಹ ಹುದ್ದೆಗಳು ಖಾಲಿಯಿಲ್ಲದಿದ್ದಲ್ಲಿ, ಹಾಗೂ
ಸ್ಥಳಾಂತರದ ನಂತರವೂ ಹುದ್ದೆಗಳು ಉಳಿದುಕೊಂಡಲ್ಲಿ, ಪೂರ್ಣ ಮಾಹಿತಿಯೊಂದಿಗೆ
ವಿವರಗಳನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಮೇಲೆ [4] ಮತ್ತು [5]
ರಲ್ಲಿ ಓದಲಾದ ಸುತ್ತೋಲೆಗಳಲ್ಲಿ ನಿಗದಿಪಡಿಸಿರುವಂತೆ ವರ್ಗಾವಾರು, ವಿಷಯವಾರು ಪಟ್ಟಿಯನ್ನು
ಸಿದ್ದಪಡಿಸಿ, ಜೇಷ್ಠತಾಪಟ್ಟಿಯನ್ನು ತಯಾರಿಸಿ, ಕೌನ್ಸಿಲಿಂಗ್ ಮುಖಾಂತರ ಜುಲೈ-ಆಗಸ್ಟ್ ತಿಂಗಳಲ್ಲಿ
ಮರು ಸ್ಥಳಾಂತರಗೊಳಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ದಾಖಲಾತಿಯ ಅಂತಿಮ
ದಿನಾಂಕ ಮುಗಿದ ತಕ್ಷಣ ಆಯಾ ಜಿಲ್ಲಾ ಉಪ ನಿರ್ದೇಶಕರಿಂದ ಎಲ್ಲಾ ಅನುದಾನಿತ ಪದವಿ
ಪೂರ್ವ ಕಾಲೇಜುಗಳ ದಾಖಲಾತಿಯ ವಿವರಗಳನ್ನು ಪಡೆದು, ನಿಗದಿತ ವಿದ್ಯಾರ್ಥಿಗಳ
ದಾಖಲಾತಿ ಇಲ್ಲದಿದ್ದಲ್ಲಿ, ಅಂತಹ ಪದವಿ ಪೂರ್ವ ಕಾಲೇಜುಗಳ ಅನುದಾನಿತ ಸಿಬ್ಬಂದಿಗಳ
ವರ್ಗಾವಾರು, ವಿಷಯವಾರು ಪಟ್ಟಿಯನ್ನು ಸಿದ್ದಪಡಿಸಿ, ಜೇಷ್ಠತಾಪಟ್ಟಿಯನ್ನು ತಯಾರಿಸಿ, ಬೇರೆ
ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ, ಕೌನ್ಸಿಲಿಂಗ್ ಮುಖಾಂತರ ಕರ್ನಾಟಕ ಪದವಿ
ಪೂರ್ವ ಶಿಕ್ಷಣ [ಶೈಕ್ಷಣಿಕ, ನೋಂದಣಿ, ಆಡಳಿತಾತ್ಮಕ ಮತ್ತು ಅನುದಾನ ಇತ್ಯಾದಿ] ನಿಯಮಗಳು
2006ರ ನಿಯಮ 23[2] ರಂತೆ ಮರು ಸ್ಥಳಾಂತರಗೊಳಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು. ಈ
ಪ್ರಕ್ರಿಯೆಯನ್ನು ಆಗಸ್ಟ್ ತಿಂಗಳ ಅಂತ್ಯದೊಳಗೆ ಮುಗಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.
ಹಾಗೂ ಪ್ರತೀ ವರ್ಷವೂ ಇದೊಂದು ಸಹಜವಾದ ವಾರ್ಷಿಕ ಪ್ರಕ್ರಿಯೆ ಎಂದು ತಿಳಿದು, ಮುಂದಿನ
ಆದೇಶದವರೆಗೆ ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

[ ಹೆಚ್.ಟಿ.ಜಯರಾಂ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.[ಪ್ರೌಢ]

ಇವರಿಗೆ:
01) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು – 560001.

02) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗ.
03) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
04) ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗ.
05) ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.[ಆಯಾ ಆಯುಕ್ತರ ಮುಖಾಂತರ]
06) ಉಪ ಕಾರ್ಯದರ್ಶಿಗಳು,[ಆಡಳಿತ] ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
07) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
08) ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿಗಳು,
09) ಅಧೀನ ಕಾರ್ಯದರ್ಶಿಗಳು, ಪ್ರಾಥಮಿಕ/ಪ್ರೌಢ/ಪದವಿ ಪೂರ್ವ ಶಿಕ್ಷಣ, ಶಿಕ್ಷಣ ಇಲಾಖೆ.
10) ಸಂಯೋಜಕರು, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ದಿನಾಂಕ: 01/04/2011

ಸಿ8(3)/ಶಾ.ಶಿ.ಅ.ಖಾ.ಪ್ರೌ.ಹೆ.ಶಿ/75/2009-10

ಜ್ಞಾಪನ

ಸರ್ಕಾರಿ ಆದೇಶದ ಸಂಖ್ಯೆ: ಇಡಿ 69 ಎಸ್.ಓ.ಹೆಚ್2011, ದಿನಾಂಕ: 31/03/2011 ರ ಯಥಾ ಪ್ರತಿಯನ್ನು ರವಾನಿಸುತ್ತಾ, ಸದರಿ ಆದೇಶದಲ್ಲಿ ಸೂಚಿಸಿರುವಂತೆ ಕ್ರಮಕೈಗೊಳ್ಳಲು ತಿಳಿಸಿದೆ.

02-04-11

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ ಧಾರವಾಡ, ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
4. ಕಛೇರಿ ಪ್ರತಿ.

\\Typing3server\d\E\EST4\Mamatha\P.A.doc